LEGISLATIVE ASSEMBLY.

SECOND DAY.

Thursday, 11th October 1951.

The Assembly met in the Crawford Hall, Mysore, at Twelve of the Clock on Thursday, 11th October 1951.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions.

Five-year Scheme for the Development of Mysore.

Q.—32. **Sri M. V. KRISHNAPPA** (Kolar District—General).—

Will the Government be pleased to state :—

(*a*) whether they have drawn up a five-year scheme for the development of Mysore ;

(*b*) the estimated cost of the scheme ;

(*c*) the portion of cost that has been promised by the Central Government ?

A.—**The Hon'ble Sri K. CHENGALARAYA REDDY** (Chief Minister).—

(*a*) Yes.

(*b*) Rs. 36·60 crores.

(*c*) The plan assumes Central assistance of the order of Rs. 8 crores.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಯೋಜನೆ ಪೂರೈಸಿದೆಯೇ ?

ಅಧ್ಯಕ್ಷರು.—ಈ ವಿಷಯದಲ್ಲಿ ಒಂದು ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

Therefore, the Hon'ble Members need not put any supplementary questions. We may go on to other questions.

Case against Sri D. Basavaraj Urs.

Q.—45. **Sri B. N. BORANNA GOWDA** (Hassan District—General).—

Will the Government be pleased to state :—

(*a*) whether it is a fact that a complaint has been filed in the Court of the Special First Class Magistrate, Saklespur, Hassan District, against Sri D. Basavaraj Urs for misbehaviour ;

(*b*) when the case was filed ;

(*c*) the number of hearings ?

A.—**The Hon'ble Sri K. CHENGALARAYA REDDY** (Chief Minister).—

(*a*) Yes.

(*b*) On 5th September 1950.

(*c*) 14.

ಶ್ರೀ ಬಿ. ಎನ್. ಬೋರಣ್ಣಗೌಡರು.—5ನೇ ಸೆಪ್ಟೆಂಬರ್ 1950 ರಲ್ಲಿ ಕೇಸು ಹಾಕಲಾಗಿದೆ ಎಂದು ಉತ್ತರದಲ್ಲಿ ಕೊಡಲಾಗಿದೆ. ಆಲ್ಲಿಂದ ಇಲ್ಲಿಯವರೆಗೆ 14 ಹಿಯರಿಂಗ್ ಆಗಿದೆ. ಅವರು ಒಂದು ಹಿಯರಿಂಗ್‌ಗಾದರೂ ಬಂದಿದ್ದರೆ?

*ಮಾನ್ಯ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಒಬ್ಬರಮೇಲೆ ಕ್ರಿಮಿನಲ್ ಕೇಸು ಹಾಕಿದರೆ ಮೊದಲನೆ ಹಿಯರಿಂಗ್‌ಗೆ ಬರಬೇಕೆಂಬ ನಿಯಾಮಕ ಇದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಕ್ರಿಮಿನಲ್ ಪ್ರೋಸೀಜರ್ ಕೋಡ್ ಪ್ರಕಾರ ನಿಯಾಮಕವಾದರೂ ಹಾಗೆ ಬರದೇ ಇರುವುದಕ್ಕೂ ಸಹ ಅವಕಾಶವಿದೆ.

* Asterisks indicate that the Speeches or other remarks have not been returned approved by the Member concerned.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).— ಇವರು, ಬಸವರಾಜ್ ಅರಸ್ ಎಂಬುವರು ಯಾರು ಸ್ವಾಮಿ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಯಾರು ಎಂದರೆ ಶ್ರೀ ಬಸವರಾಜ ಅರಸ್‌ರವರು. ಮಾನ್ಯ ಸದಸ್ಯರಿಗೆ ಸಮಾಚಾರ ಏನು ಬೇಕು ಎಂಬುದನ್ನು ಖಚಿತವಾಗಿ ತಿಳಿಸಿದರೆ ಉತ್ತರ ಕೊಡಬಹುದು.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಯಾರು ಎಂಬುದನ್ನು ತಿಳಿಸಿಲ್ಲ. ಆದ್ದರಿಂದ ಅಷ್ಟೊಂದು ಮುಖ್ಯವಾದಂಥ ವ್ಯಕ್ತಿಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಕೇಳಿದೆ ಅಷ್ಟೆ.

The Hon'ble Sri K. CHENGALARAYA REDDY.—He is one of our officers of Government. He was Sub-Division Officer at Saklespur at that time.

Sri H. K. VEERANNA GOWDH (Mandya District—General).—What is the nature of the offence for which he is proceeded against? Why is he prosecuted?

The Hon'ble Sri K. CHENGALARAYA REDDY.—Some complaint by a private person—insult or misbehaviour; I cannot give all the details at this stage.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ಇವರು ಸರ್ಕಾರಿ ಅಧಿಕಾರಿಗಳು. ಕೇಸು ಹಾಕಬಹುದು ಎಂದು ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಈ ಕೇಸ್‌ನಲ್ಲಿ ಅಪ್ಪಣೆ ಕೊಡಬೇಕಾದ್ದು ಅನಾವಶ್ಯಕ ಎಂದು ಕಂಡುಬಂದು ಅಪ್ಪಣೆ ಕೊಡಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗಾದರೆ ಸರ್ಕಾರಿ ಆಫೀಸರುಗಳಮೇಲೆ ಖಾಸಗಿ ಜನರು ಕೇಸು ಹಾಕಬೇಕಾದರೆ ಅಪ್ಪಣೆ ಇಲ್ಲದೆ ಹಾಕಬಹುದೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಆಯಾಯಾ ಸಂದರ್ಭಗಳಮೇಲೆ ಅನುಸರಿಸಿಹೋಗುತ್ತದೆ.

Sri H. SIDDAVEERAPPA (Chitaldrug District—General).—Is this a private complaint?

The Hon'ble Sri K. CHENGALARAYA REDDY.—Yes.

Famine-stricken Areas in Kolar District.

Q.—92. **Sri G. NARAYANA GOWDA** (Kolar District—General).—

Will the Government be pleased to state :—

(*a*) the areas that were declared famine-stricken in Kolar District last year;

(*b*) the approximate population of the above famine-stricken areas;

(*c*) the quantity of foodgrains that are being supplied to those areas?

A.—**The Hon'ble Sri K. CHENGALARAYA REDDY** (Chief Minister).—

(*a*) No part of Kolar District was declared as famine-stricken in 1950-51.

(*b*) and (*c*) Do not arise in view of reply to Clause (*a*).

ಶ್ರೀ ಜಿ. ನಾರಾಯಣಗೌಡರು.—ಕೋಲಾರ ಜಿಲ್ಲೆಯಲ್ಲಿ ಹೋದವರ್ಷ ಪರಿಹಾರಕಾರ್ಯಕ್ರಮ ಕೈಗೊಂಡಿರಲಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವು ಕೈಗೊಳ್ಳಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—ಕಾರಣವೇನು ಸ್ವಾಮಿ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಅಲ್ಲಿ ಮಳೆ ಅಭಾವದಿಂದ ಬೆಳೆಗಳಿಗೆ ಬಹಳ ನಷ್ಟವಾಗಿ ತೊಂದರೆ ಆದದ್ದರಿಂದ ಕೆಲವು ಕಡೆ ಪರಿಹಾರಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದರು. Famine-stricken area ಎಂದು ಡಿಕ್ಲೇರ್ ಮಾಡಿದ್ದಾರೆಯೇ ಎಂದು ಪ್ರಶ್ನೆ ಕೇಳಲಾಗಿದೆ. ಅದಕ್ಕೆ technical ಆಗಿ no ಎಂದು ಉತ್ತರ ಕೊಡಲಾಗಿದೆಯೇ ಹೊರತು ಬೇಕಾದಷ್ಟು ಪರಿಹಾರ ಕಾರ್ಯಕ್ರಮ ಮಂಜೂರಾಯಿತು ಮತ್ತು ಆಹಾರ ಧಾನ್ಯಗಳನ್ನು ಕೂಡ ಅಡೀಷನಲ್